

ಎಡದಿಂದ ಬಲಕ್ಕೆ:

1. ಕನ್ಯಾದಾನ ನಡೆದದ್ದು ಅದೇ ಕಾಡಿನಲ್ಲೇ (3)
3. ಧಣಿಗೆ ಪ್ರಿಯವಾದದ್ದು ಇದೇ ಭೂಮಿಯೇ (3)
4. ರಾಜ್ಯಕ್ಕೇ ಪ್ರಸಿದ್ಧನಾದ ಅರಸ ಈತ (3)
6. ಕಂಡವರಿಗೆಲ್ಲ ಕೇಡು ಎಸಗುತ್ತಾನೆ ಕೆಟ್ಟವ (3)
7. ಪ್ರಾಕಾರದ ಕೆಲಸಕ್ಕೆ ಈ ಎಲ್ಲ ಸಾಮಗ್ರಿ (4)
9. ಆತನ ಮಾವನಿಗೆ ತಕ್ಕಂತಿದೆ 'ಭಾರೀ ನಿಧಾನ' (4)
11. ಗುಸುಗುಸುವಿನ ನಡುವೆಯೇ ಮಂದಹಾಸವೇ? (4)
13. ಶತ ತಾವರೆಗಳ ನಡುವೆ ಯಾವುದು ಈ ಗಿಡಮೂಲಿಕೆ? (4)
15. ಕಮ್ಮಿ ಏನೇ ಇರಲಿ, ಅದಂತೂ ಆಸೆ (3)
17. ನೀರಿನ ಆಳ ತಿಳಿದ ಮೇಲೆ ನೆಮ್ಮದಿ (3)
18. ಕುರಿಮರಿ ಬಿದ್ದ ಹಳ್ಳವೇ ಹಿಂದು ಮುಂದು (3)
19. ಗಾಡಿಗೆ ತುಂಬಿ ತಂದದ್ದೆಲ್ಲ ಬರೀ ಮಡಿಕೆ (3)

ಮೇಲಿಂದ ಕೆಳಕ್ಕೆ:

1. ಕಣಿ ಹೇಳಿದ್ದಕ್ಕೆ ಇದು ಭಕ್ತಿಯ ಶುಲ್ಕ (3)
2. ಆ ಕಾರನ್ನೇರಿದವರು ಕಂಡದ್ದು ಯಮಾಲಯ (3)
3. ಧನ ಕನಕ ಸಂಗ್ರಹಿಸಿಯೇ ಶ್ರೀಮಂತ (3)
5. ಆತ ಕಂಡ ಮಹಿಮೆ ಹೆಚ್ಚೇನಿಲ್ಲ ಬಿಡಿ (3)
7. ಪಲ್ಯವನ್ನ ಬಡಿಸಿದೊಡನೆ ಓಟ (4)
8. ರಂಗವೇರಿ ನಿಂತವರ ಮುಖದ ತುಂಬ 'ಸೂರ್ಯನ ಬಣ್ಣ' (4)
9. ಶಾಪದಂತೆ ಕಾಡುತ್ತಿದೆ 'ಆಸೆಯ ಕುಣಿಕೆ' (4)
10. ಗಮಾರನ ಉಡುಪು– ಮಡಿಕೆ ಕೆಟ್ಟಿಲ್ಲ! (4)
12. ನಾಳಿನಿಂದ ಅರಳಲಿದೆ ಪ್ರಸಿದ್ಧ ಕುಸುಮ (3)
14. ತಕರಾರಿನ ದನಿ ಎಷ್ಟು ಎತ್ತರ! (3)
15. ಕೂಳಿಗಾಗಿ ನಡೆದಿದೆ ನೋಡಿ ಹೊಡೆದಾಟ (3)
16. ಗೆರೆಯನ್ನೆಳೆದ ಹಾಳೆ ತುಂಬ ಸುಕ್ಕು ಸುಕ್ಕು (3)

## ಪದಬಂಧ: 18-3-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಪಾದನೆ; 3. ಮುರುಗ; 4. ನೆನಪು; 6. ತಿರುಗಿಸು; 7. ಕುಸುಮ; 9. ಆಕರ; 11. ತೆಪರ; 13. ದಮನ; 15. ಕಾರಾಗೃಹ; 17. ರಜಾಯಿ; 18. 'ಛರಾಕ'; 19. ಸುಳ್ಳುಮಾತು.

ಮೇಲಿಂದ ಕೆಳಕ್ಕೆ:

1. ಸಂಗತಿ; 2. ನೆನೆಸು; 3. ಮುನಿಸು; 5. ಪುಳಕ; 7. ಕುಟಿಲತೆ; 8. ಮಹತ್ತರ; 9. ಆರ್ತನಾದ; 10. ರಮ್ಯವನ; 12. ಪಗಾರ; 14. ಮರುಕ; 15. ಕಾಯಿಸು; 16. ಹಳತು.

# ಖಗ ಸೋಜಿಗ

## 'ಆಲ್ ಬಟ್ರಾಸ್'- ಏನು ವಿಶೇಷ?

'ಆಲ್ ಬಟ್ರಾಸ್'– ಅದೊಂದು ಕಡಲ ಹಕ್ಕಿ. ಹಕ್ಕಿ ಎನ್ನುವುದಕ್ಕಿಂತ 'ಜೀವಂತ ವಿಮಾನ' ಎನ್ನುವುದೇ ಹೆಚ್ಚು ಸೂಕ್ತ ಎನಿಸುವಂಥ ಹಕ್ಕಿ ಅದು. ಹಾರುತ್ತಿರುವಾಗ ಜೆಟ್ ವಿಮಾನದಂತೆ, ನೆಲಕ್ಕೆ ಇಳಿದಾಗ ಪಿಂಗಾಣಿಯ ಪುತ್ಥಳಿಯಂತೆ ಕಾಣುವ ಆಲ್ ಬಟ್ರಾಸ್‌ಗೆ ಬೇರೆ ಯಾವ ಹಕ್ಕಿಯನ್ನೂ ಹೋಲಿಸುವುದು ಸಾಧ್ಯ ಇಲ್ಲ. ಏಕೆಂದರೆ ರೆಕ್ಕೆ ವಿಸ್ತಾರದಲ್ಲಿ, ಮುಗಿಲಲ್ಲಿ ತೇಲುವ ಸಾಮರ್ಥ್ಯದಲ್ಲಿ, ನಿರಂತರ ಹಾರಬಲ್ಲ ಶಕ್ತಿಯಲ್ಲಿ... ಹಾಗೆಲ್ಲ ಯಾವುದರಲ್ಲೂ ಅದಕ್ಕೆ ಸಾಟಿಯಾಗಬಲ್ಲ ಹಕ್ಕಿ ಇನ್ನೊಂದೂ ಇಲ್ಲ.

ಅದರಲ್ಲಿ ಕಿಂಚಿತ್ತೂ ಉತ್ಪ್ರೇಕ್ಷೆ ಇಲ್ಲ. ಆಲ್‌ಬಟ್ರಾಸ್‌ನ ವೈಶಿಷ್ಟ್ಯಗಳ ಈ ನೈಜ ಅಂಕಿ– ಅಂಶಗಳನ್ನು ನೀವೇ ನೋಡಿ: 'ಆಲ್ ಬಟ್ರಾಸ್‌ನ ರೆಕ್ಕೆ ವಿಸ್ತಾರ ಹನ್ನೊಂದೂವರೆ ಅಡಿ! ನೆಲವನ್ನೇ ನೋಡದೆ ಸಾಗರಗಳ ಮೇಲೆ ತಿಂಗಳುಗಟ್ಟಲೆ ವರ್ಷಗಟ್ಟಲೆ ಕಾಲ ತೇಲುತ್ತಲೇ ಉಳಿಯುವ ಈ ಹಕ್ಕಿ ಇಡೀ ಜಗತ್ತನ್ನೇ ಪರಿಭ್ರಮಿಸುತ್ತದೆ. ರೆಕ್ಕೆಗಳನ್ನೇ ಬಡಿಯದೆ ಹಾರುತ್ತಲೇ ಬೇಟೆಯಾಡಿ, ಊಟ



ಮಾಡಿ, ಹಾರುತ್ತಲೇ ನಿದ್ರಿಸಿ ಕೇವಲ ಸಂತಾನವರ್ಧನೆಗೆ ಎರಡು ವರ್ಷಗಳಿಗೊಮ್ಮೆ ನೆಲಕ್ಕಿಳಿಯುವ ಹಕ್ಕಿ ಇದು!' ಹಾಗಾದದ್ದರಿಂದಲೇ ಆಲ್ ಬಟ್ರಾಸ್ ಹಕ್ಕಿ ತನ್ನ ಐವತ್ತನೆಯ ವಯಸ್ಸನ್ನು ತಲುಪುವಷ್ಟರಲ್ಲಿ ಕನಿಷ್ಠ ಅರವತ್ತು ಲಕ್ಷ ಕಿಲೋಮೀಟರ್ ಹಾರಾಟ ಪೂರೈಸಿರುತ್ತದೆ! ಈ ಎಲ್ಲ ಅಂಶಗಳಲ್ಲೂ ಆಲ್ ಬಟ್ರಾಸ್‌ಗಳದು ವಿಶ್ವ ದಾಖಲೆ!

ಬಹುಪಾಲು ಬದುಕನ್ನೆಲ್ಲ ಕಡಲ ಮೇಲೆ ಹಾರುತ್ತಲೇ ಕಳೆವ ಈ ಭಾರೀ ಹಕ್ಕಿಗಳಿಗೆ ಸಹಜವಾಗಿಯೇ ಸಂತಾನ ಸಾಮರ್ಥ್ಯ ಕಡಿಮೆ. ಒಮ್ಮೆ 'ದಂಪತಿ'ಗಳಾಗುವ ಹೆಣ್ಣು–ಗಂಡು ಹಕ್ಕಿಗಳು ಆಯುಷ್ಯಪೂರ್ತಿ ಏಕ ಪತಿ–ಪತ್ನೀ ವ್ರತಸ್ಥರಾಗಿರುತ್ತವೆ. ನಿರ್ದಿಷ್ಟ ದ್ವೀಪಗಳಲ್ಲಿ ಎರಡು ವರ್ಷಗಳಿಗೊಮ್ಮೆ ನೆಲಕ್ಕಿಳಿದು ಒಂದೇ ಒಂದು ಮೊಟ್ಟೆ ಇಟ್ಟು ಕಾವು ಕೊಟ್ಟು ಮರಿ ಮಾಡಿ 'ಪೋಷಕ ಹಕ್ಕಿ'ಯೊಂದರ ರಕ್ಷಣೆಯಲ್ಲಿರಿಸಿ ತಂದೆ–ತಾಯಿ ಎರಡೂ ಆಹಾರಾನ್ವೇಷಣೆಗೆ ಹೊರಡುತ್ತವೆ. ಎರಡು– ಮೂರು ವಾರಗಳ ಕಾಲ ಎಡೆಬಿಡದೆ ಹಾರಿ, ಹಲವಾರು ಸಾವಿರ ಕಿಲೋಮೀಟರ್ ಪಯಣಿಸಿ ಆಹಾರ ಸಂಗ್ರಹಿಸಿ ಮರಿಯ ಬಳಿಗೆ ಹಿಂದಿರುಗುತ್ತವೆ. ಮರಿಗಾಗಿ ಶೇಖರಿಸಿದ ಆಹಾರವನ್ನೆಲ್ಲ ಭಾಗಶಃ ಜೀರ್ಣಿಸಿ, ಎಣ್ಣೆಯಂಥ ದ್ರವವನ್ನಾಗಿ ಪರಿವರ್ತಿಸಿ ತರುವ ಆಲ್ ಬಟ್ರಾಸ್ ಆ ಪೋಷಕಾಂಶಭರಿತ ತೈಲವನ್ನು ಮರಿಯ ಬಾಯಿಗೆ ನೇರವಾಗಿ ಸುರಿಯುತ್ತದೆ. ಹದಿನೈದು ನಿಮಿಷ ಅವಧಿಯ ಈ 'ಇಂಧನ ತುಂಬುವ ಕಾರ್ಯಕ್ರಮ'ದಲ್ಲಿ ಮರಿಯ ಜಠರ ಸೇರುವ ಆಹಾರ ಅದರ ಶರೀರ ತೂಕದ ಮೂರರ ಒಂದಂಶದಷ್ಟಿರುತ್ತದೆ.

ಹೀಗೆ ಕೆಲ ಕೆಲವು ವಾರಗಳಿಗೊಮ್ಮೆ ಆಹಾರ ಪಡೆದು ಭರದಿಂದ ಬೆಳೆವ ಮರಿ ಒಂದು ವರ್ಷದ ವೇಳೆಗೆ ಪ್ರೌಢವಾಗುತ್ತದೆ. ಸ್ವತಂತ್ರವಾಗುತ್ತದೆ. ಕಡಲ ಮೇಲಿನ ಆಗಸದಲ್ಲಿ ತೇಲತೊಡಗುತ್ತದೆ.

■ ಎನ್. ವಾಸುದೇವ್